**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ. ನಂಬರ 6566 /2024 ಸಿ.ಡಬ್ಲೂ.**2** ಪಿ.ಡಬ್ಲೂ.**6**

| | |
|---|---|
| ಹೆಸರು | ಖಾಜಾಪ್ಪಾ |
| ತಂದೆ/ಗಂಡ | ಭೀಮಶಾ ಮುಗಳಿ |
| ವಯಸ್ಸು | 26 ವರ್ಷ |
| ಉದ್ಯೋಗ | ವಾಹನ ಚಾಲಕ |
| ವಾಸಸ್ಥಳ | ಜಳಕಿ (ಕೆ) |

ದಿನಾಂಕ 05-01-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ಆರೋಪಿತರು ನನ್ನ ಅಕ್ಕ ಮತ್ತು ಮಾಮ ಆಗಬೇಕು. ಚಾಸಾ 1 ನನ್ನ ಚಿಕ್ಕಮ್ಮ, ಚಾಸಾ 3 ಪರಿಚಯ ಇರುತ್ತಾರೆ. ಚಾಸಾ 4 ಮತ್ತು 5 ನನ್ನ ಅಕ್ಕಂದಿರು, ಚಾಸಾ 6 ನನ್ನ ತಾಯಿ, ಚಾಸಾ 7 ನನ್ನ ಮಾಮನ ಮಗ.

ದಿಃ 05-09-2024 ರಂದು ಸಾ. 5.00 ರಿಂದ 6.00 ಗಂಟೆಯವರೆಗೆ ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ನಾನು ಘಟನಾ ಸ್ಥಳಕ್ಕೆ ಬರುವುದಕ್ಕಿಂತ ಮುಂಚೆ ಜಗಳ ಆಗಿತ್ತು. ಪಂಚನಾಮೆಯ ನಂತರ ಪೋಲಿಸರು ಭಾವಚಿತ್ರವನ್ನು ತೆಗೆದುಕೊಂಡು ಪಂಚನಾಮೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ಗುನ್ಹಾ ಸ್ಥಳದ ಪಂಚನಾಮೆಯ ಮೇಲೆ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3, ಸಾಕ್ಷಿಯ ಸಹಿಯನ್ನು ನಿಪಿ. 3 (ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ನಿಪಿ. 1 ನ್ನು ನೋಡಿ ಗುರುತಿಸುತ್ತಾರೆ.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಭಾಗಶಃ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು. )**

ಪಾಟೀ ಸವಾಲುಃ ಮಾನ್ಯ ಸ ಸ ಅ ವಕೀಲರಿಂದ:

ಚಾಸಾ 1 ರವರು ಘಟನಾ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಎಸ್ ಎಸ್ ಸಿ ವಕೀಲರಿಂದ:

ನಾನು, ಚಾಸಾ 1, 5 ಮತ್ತು 6 ರವರು ಖಾಸಾ ಸಂಬಂಧಿಕರು ಎಂದರೆ ಸರಿ. ಚಾಸಾ 5 ರವರು ನನ್ನ ಸ್ವಂತ ಅಕ್ಕ ಎಂದರೆ ಸರಿ. ಚಾಸಾ 1, 4 ರಿಂದ 6 ರವರ ಸಂಬಂಧವು ಆರೋಪಿತರೊಂದಿಗೆ ಮೊದಲಿನಿಂದಲೂ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಮಾಡಲು ನನಗೆ ಚಾಸಾ 5 ರವರು ಕರೆದಿರುತ್ತಾರೆ. ಘಟನೆ ನಡೆದ ದಿನವೇ ಪಂಚನಾಮೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆ ಮಾಡುವ ಸಮಯದಲ್ಲಿ ನಾನು, ಚಾಸಾ 3 ಮತ್ತು ಚಾಸಾ 1 ರವರು ಇದ್ದರು. ಸಾಕ್ಷಿಯು ಮುಂದುವರೆದು ಚಾಸಾ 5 ಮತ್ತು 6 ರವರು ಇದ್ದರು ಅಂತಾ ನುಡಿಯುತ್ತಾರೆ. ಪಂಚನಾಮೆಗೆ ಪೋಲಿಸರು ಸಹಿ ಮಾಡು ಅಂತಾ ಹೇಳಿದ ಕಾರಣ ಸಹಿ ಮಾಡಿರುತ್ತೇನೆ ಅಂತಾ ಸಾಕ್ಷಿಯು ಪೋಲಿಸರು ನ್ಯಾಯಾಲಯದಲ್ಲಿ ನಾವು ಹೇಳಿದಾಗ ಬಂದು ಸಾಕ್ಷಿ ಹೇಳಬೇಕು ಅಂತಾ ಹೇಳಿದ ಕಾರಣ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪೋಲಿಸರು ನನ್ನ ಸಮಕ್ಷಮ ನಕಾಶೆಯನ್ನು ತೆಗೆದಿರುತ್ತಾರೆ. ಸದರಿ ಜಾಗೆಯ ಚಕಬಂದಿ ಎಂದರೆ ಪೂರ್ವಕ್ಕೆ - ಪರಸಪ್ಪಾ

ಮೇಲಿನಕೇರಿಯವರ ಖುಲ್ಲಾ ಜಾಗೆ, ಸಾಕ್ಷಿಯು ಮುಂದುವರೆದು ನನಗೆ ದಿಕ್ಕುಗಳು ಅಷ್ಟು ಗೊತ್ತಾಗುವುದಿಲ್ಲ ಅಂತಾ ನುಡಿಯುತ್ತಾರೆ. ನಿಪಿ. 1 ನ್ನು ಪೋಲಿಸರು ತೆಗೆದಿರುತ್ತಾರೆ. ಪಂಚನಾಮೆಯನ್ನು ಪೋಲಿಸರು ಮೊದಲೇ ತಯ್ಯಾರಿಸಿಕೊಂಡು ಬಂದಿದ್ದರು, ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಸಮಕ್ಷಮ ಬರೆದಿರುತ್ತಾರೆ ಅಂತಾ ನುಡಿಯುತ್ತಾರೆ. ಸದರಿ ಸಮಯದಲ್ಲಿ 3 ಜನ ಪೋಲಿಸರು ಇದ್ದರು. ನನಗೆ ನ್ಯಾಯಾಲಯದಿಂದ ಈ ದಿನ ಸಮನ್ಸ ಬಂದಿರಲಿಲ್ಲ ಪೋಲಿಸರು ದೂರವಾಣಿ ಮುಖಾಂತರ ತಿಳಿಸಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ನಾನು, ಚಾಸಾ 4 ರವರೊಂದಿಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 4 ರವರೆ ನನ್ನನ್ನು ಈ ದಿನ ಸಾಕ್ಷಿ ಹೇಳಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

ದಿಃ 05-09-2024 ರಂದು ಸಾ. 5.00 ರಿಂದ 6.00 ಗಂಟೆಯವರೆಗೆ ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಬರುವುದಕ್ಕಿಂತ ಮುಂಚೆ ಜಗಳ ಆಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯ ನಂತರ ಪೋಲಿಸರು ಭಾವಚಿತ್ರವನ್ನು ತೆಗೆದುಕೊಂಡು ಪಂಚನಾಮೆಗೆ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ